**ಸಾಕ್ಷಿಯನ್ನು ದಿಃ10.03.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ.

2. ನಿಡಿ - 2 ನ್ನು ಭೋಗ್ಯ ಪತ್ರ ಎಂದು ಹಾಜರುಪಡಿಸಿದ್ದೇವೆ. ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಕ್ರಯಪತ್ರ ಇದೆಯಾ ಎಂದರೆ, ಇದೆ. ಅದನ್ನು ಹಾಜರುಪಡಿಸಿದ್ದೀರಾ ಎಂದರೆ, ಇಲ್ಲ, ಅದನ್ನು ಹುಡುಕಲು ಅರ್ಜಿ ಸಲ್ಲಿಸಿದ್ದೇವೆ.

3. ಸದರಿ ಕ್ರಯಪತ್ರವನ್ನು ಕರಿಗೌಡರು ಕೆಂಗ ಹುಚ್ಚೇಗೌಡರಿಗೆ ಬರೆದುಕೊಟ್ಟಿದ್ದಾರೆ. ಅದರ ಜಂಜರ್ ನಂ.620. ಪೂರ್ವ ಪಶ್ಚಿಮ 11 ಗಜ ಹಾಗೂ ದಕ್ಷಿಣೋತ್ತರ 44 ಗಜ.

4. ನಿಡಿ - 2 ರಲ್ಲಿ ಜಂಜರ್ ನಂ.620 ಎಂದು ನಮೂದು ಮಾಡಿದ್ದಾರೆ. ಅದರ ಅಳತೆ ಗೊತ್ತು. ಅದನ್ನು ಕರಿಗೌಡರು ಕೆಂಗ ಹುಚ್ಚೇಗೌಡರಿಗೆ ಬರೆದುಕೊಟ್ಟಿದ್ದಾರೆ.

5. ಕೆಂಗಹುಚ್ಚೇಗೌಡರ ತಂದೆ ಹೆಸರು ನನಗೆ ಗೊತ್ತಿಲ್ಲ. ಕರಿಗೌಡರ ತಂದೆ ಹೆಸರು ಕೆಂಗೇಗೌಡರು. ಅವರಿಗೆ ಹಾಗೂ ನಮಗೆ ಯಾವುದೇ ಸಂಬಂಧ ಇಲ್ಲ.

6. ಕ್ರಯಪತ್ರವನ್ನು ಯಾವ ದಿನಾಂಕ ಬರೆದುಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ.

7. ಕರಿಗೌಡರು ಕೆಂಗ ಹುಚ್ಚೇಗೌಡರಿಗೆ ಬರೆದುಕೊಟ್ಟಿದ್ದಾರೆ ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಾ ಎಂದರೆ, ಭೋಗ್ಯಪತ್ರದ ಆಧಾರದ ಮೇಲೆ.

8. ಕ್ರಯಪತ್ರ ಆಗಿದೆ ಎಂದು ಯಾವಾಗ ಗೊತ್ತಾಯಿತು ಎಂದರೆ ಅದು ಮೂಲ ನನ್ನ ತಾತನಿಗೆ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ಜಂಜರ ನಂ.620 ಪಂಚಾಯತಿಯಲ್ಲಿ ನನ್ನ ತಾತನ ಹೆಸರಿಗೆ ಖಾತೆ ಆಗಿದೆ. ಅದನ್ನು ಹಾಜರುಪಡಿಸಿಲ್ಲ. ಈಗ ಯಾರ ಹೆಸರಿನಲ್ಲಿದೆ ಎಂದರೆ, ವಾದಿಗಳು ಅಕ್ರಮವಾಗಿ ಮಾಡಿಕೊಂಡಿದ್ದಾರೆ.

9. ಅವರು ಅಕ್ರಮವಾಗಿ ಮಾಡಿಕೊಂಡ ಬಗ್ಗೆ 2020 ರಲ್ಲಿ ಅಳತೆಗೆ ಬಂದಾಗ ಗೊತ್ತಾಗಿರುತ್ತದೆ.

10. ಜಂಜರ್ ನಂ.59 ಹಾಗೂ ಸ್ವತ್ತಿನ ನಂ.56 ನಿಮ್ಮ ತಾತನಿಗೆ ಸಂಬಂಧಪಟ್ಟಿದ್ದಾ ಎಂದರೆ, ಆಸ್ತಿ ನಮ್ಮ ತಾತನಿಗೆ ಸಂಬಂಧಪಟ್ಟಿದ್ದು ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ದಾಖಲೆ ನನ್ನ ತಾತನ ಹೆಸರಿನಲ್ಲಿ ಇಲ್ಲ.

11. ಹುಚ್ಚೇಗೌಡ ಬಿನ್ ಕಳಸೇಗೌಡ ಎಂದರೆ ವಾದಿ ಎಂದರೆ ಸರಿ.

12. ಕಳಸೇಗೌಡ ಬಿನ್ ಸಣ್ಣೇಗೌಡ ಎಂದರೆ ವಾದಿಯ ತಂದೆ ಎಂದರೆ ಸರಿ.

13. ಜಂಜರ್ ನಂ.53 ವಾದಿಯ ಹೆಸರಿನಲ್ಲಿ ಆದ ನಂತರ 59 ಆಗಿದೆ ಎಂದರೆ, ಇಲ್ಲ ನನ್ನ ತಾತನ ಆಸ್ತಿ ಎಂದು ನುಡಿಯುತ್ತಾರೆ. ಅವರು ಅಕ್ರಮವಾಗಿ ಮಾಡಿಕೊಂಡಿದ್ದಾರೆ.

14. ಕಳಸೇಗೌಡ ಬಿನ್ ಪುಟ್ಟೇಗೌಡ ಎಂದರೆ ಯಾರು ಎಂದರೆ ನನಗೆ ಗೊತ್ತಿಲ್ಲ.

15. ಕೆಂಗಹುಚ್ಚೇಗೌಡರಿಗೆ ಕರಿಗೌಡರು ಅವರ ಪಿತ್ರಾರ್ಜಿತ ಆಸ್ತಿಯನ್ನು ಬರೆದುಕೊಟ್ಟಿರುತ್ತಾರೆ.

16. ಪಂಚಾಯತಿಗೆ ಮಾಹಿತಿ ಹಕ್ಕು ಕಾಯ್ದೆಯಡಿ ಕರಿಗೌಡರ ಹೆಸರಿನಲ್ಲಿರುವ ಡಿಮ್ಯಾಂಡ್ ಕೊಡುವಂತೆ ಅರ್ಜಿ ನೀಡಿದ್ದೆವು. ಜಂಜರ್ ನಂ.56 ಹಾಗೂ 59ರ ಮೂಲ ದಾಖಲೆ ಕೋರಿ ಅರ್ಜಿ ಸಲ್ಲಿಸಿದ್ದೆವು. ಜಂಜರ್ ನಂ.56 ಹಾಗೂ 59ಕ್ಕೆ ನಿಮ್ಮ ತಂದೆ ಕಂದಾಯ ಕಟ್ಟಿದ್ದಾರಾ ಎಂದರೆ, ಕಟ್ಟಿದ್ದಾರೆ. ಆ ಬಗ್ಗೆ ರಶೀದಿ ಹಾಜರುಪಡಿಸಿಲ್ಲ. ನಾನು ಆ ಬಗ್ಗೆ ರಶೀದಿ ನೋಡಿಲ್ಲ, ನನ್ನ ಪೂರ್ವಿಕರು ನನ್ನ ತಾತ ಕಟ್ಟಿರುವ ಬಗ್ಗೆ ಹೇಳಿದ್ದರು.

17. ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ನೀಡುವ ಮೊದಲು ಪಂಚಾಯತಿಗೆ ನಾವು ಅರ್ಜಿ ನೀಡಿದ್ದೆವು.

18. ಜಂಜರ್ ನಂ.59 ಹಾಗೂ ಸ್ವತ್ತಿನ ನಂ.56 ರಲ್ಲಿ ನಿಮ್ಮ ಕುಟುಂಬಕೆ ಆಸ್ತಿ ಇತ್ತು ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಾ ಎಂದರೆ, ಭೋಗ್ಯಪತ್ರದ ಮೇಲೆ ಹೇಳುತ್ತಿದ್ದೇವೆ. ಸದರಿ ಪತ್ರದಲ್ಲಿ ಜಂಜರ್ ನಂ.59 ಹಾಗೂ ಸ್ವತ್ತಿನ ನಂ.56 ಎಂದು ಹೇಳಿದ್ದಾರಾ ಎಂದರೆ, ಇಲ್ಲ.

19. ನಮ್ಮ ಬಳಿ ಭೋಗ್ಯ ಪತ್ರ ಇದೆ ಎಂದು 5-10 ವರ್ಷದ ಹಿಂದೆ ಗೊತ್ತಾಗಿದೆ. ಸದರಿ ಪತ್ರದ ಮೇಲೆ ಭೋಗ್ಯ ಬಿಡುಗಡೆ ಮಾಡಿಸಿಕೊಂಡಿಲ್ಲ.

20. 1975 ರಲ್ಲಿ ಭೋಗ್ಯ ಮಾಡಿದ ಬಗ್ಗೆ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ.

21. ನೀವು ಹೇಳಿದ ಚಕ್ಕುಬಂದಿಯಲ್ಲಿ ದಾವಾ ಸ್ವತ್ತು ಬರುತ್ತದೆ ಎಂದು ತೋರಿಸಲು ದಾಖಲೆ ಇದೆಯಾ ಎಂದರೆ, ಪಂಚಾಯತಿ ದಾಖಲೆ ಇದೆ, ಅದನ್ನು ಪಡೆಯಲು ಅರ್ಜಿ ನೀಡಿದ್ದೇವೆ.

22. ಪ್ರತಿವಾದ ಪತ್ರದಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ ಕರಿಗೌಡರಿಗೆ ಪಿತ್ರಾರ್ಜಿತವಾಗಿ ಬಂದಿದೆ ಎಂದು ಬರೆಸಿದ್ದೇವೆ.

23. ಭೋಗ್ಯ ಪತ್ರ ಆದ ನಂತರ ಅದರಲ್ಲಿ ಕಾಣಿಸಿರುವ ಸ್ವತ್ತು ಕೆಂಗಹುಚ್ಚೇಗೌಡರ ಸ್ವಾಧೀನದಲ್ಲಿ ಇದೆ ಎಂದರೆ, ಸರಿಯಲ್ಲ.

24. ಶಿವಣ್ಣ, ನಾಗೇಗೌಡ, ಜಗದೀಶ ಹಾಗೂ ದಶರಥ ರವರು ಕಂದಾಯ ಕಟ್ಟಿದ್ದಾರಾ ಎಂದರೆ ನನಗೆ ಗೊತ್ತಿಲ್ಲ.

25. ಹುಚ್ಚೇಗೌಡರು ನಮ್ಮ ಜಂಜರ್ ನಂ.620 ಕ್ಕೆ ಸಂಬಂಧಪಟ್ಟಂತೆ ದಾವೆ ಹಾಕಿದ್ದಾರೆ.

26. ಪ್ರತಿವಾದ ಪತ್ರವನ್ನು ನಾವೇ ಹೇಳಿ ಹಾಕಿರುತ್ತೇವೆ.

27. ವಾದಿ ಹುಚ್ಚೇಗೌಡರಿಗೆ ಹಾಗೂ ಜಗದೀಶ ದಶರಥ ರವರಿಗೆ ದಿಃ 15.11.2020 ರಲ್ಲಿ ದಾವೆ ಸ್ವತ್ತಿಗೆ ಸಂಬಂಧಪಟ್ಟಂತೆ ಜಗಳ ಆಗಿರುತ್ತದೆ ಎಂದರೆ, ನಾವು ಸ್ವಾಧೀನದಲ್ಲಿ ಇರುವಾಗ ಅವರು ಬಂದು ಗಲಾಟೆ ಮಾಡಿರುತ್ತಾರೆ.

28. ನೀವು ದಾವಾ ಸ್ವತ್ತಿನ ನಿವೇಶನಕ್ಕೆ ಅತಿಕ್ರಮ ಪ್ರವೇಶ ಮಾಡಿ ಅವರ ಸ್ವಾಧೀನಕ್ಕೆ ಅಡ್ಡಿಪಡಿಸಿ ಅವರ ಹಕ್ಕನ್ನು ಅಲ್ಲಗಳೆದು ಗಲಾಟೆ ಮಾಡಿದ್ದೀರಾ ಎಂದರೆ ಸರಿಯಲ್ಲ.

29. ದಾವಾ ಸ್ವತ್ತು ವಾದಿಗೆ ಅವರ ತಂದೆಯಿಂದ ಬಂದ ಸ್ವತ್ತು ಎಂದರೆ ಸರಿಯಲ್ಲ. ಅವರ ತಂದೆ ಅವರು ಜೀವಿತ ಕಾಲದಲ್ಲಿ ಸ್ವಾಧಿನದಲ್ಲಿ ಇದ್ದು, ಅವರ ಮರಣಾ ನಂತರ ವಾದಿಯು

ಖಾತೆ ಮಾಡಿಸಿಕೊಂಡು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ, ನಾವೇ ಸ್ವಾಧೀನದಲ್ಲಿ ಇದ್ದೇವೆ.

30. ಜಂಜರ್ ನಂ.59 ಹಾಗೂ ಸ್ವತ್ತಿನ ನಂ.56 ರ ಪೂರ್ವಪಶ್ಚಿಮ 39 ಹಾಗೂ ಉತ್ತರ ದಕ್ಷಿಣ 100 ಅಡಿ ಮೇಲೆ ನಮಗೆ ಹಕ್ಕು ಇದೆ. ಯಾವ ರೀತಿ ಇದೆ ಎಂದರೆ, ನಮ್ಮ ತಾತನ ಕಾಲದಿಂದಲೂ ನಾವೇ ಅನುಭೋಗದಲ್ಲಿದ್ದೇವೆ ಎಂದು ನುಡಿಯುತ್ತಾರೆ. ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ